ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 24-07-2024 ರಂದು ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ ಟಿ ಎನ್ ನ್ಯಾಯವಾದಿರವರಿಂದಃ</u>

ಈ ದಾವೆಯ ಪಕ್ಷಗಾರರ ವಿರುದ್ಧ ಈದೇ ರೀತಿಯ ಇನ್ನೊಂದು ದಾವೆ ಅಸಲು ದಾವೆ ಸಂಖ್ಯೆ 42/2020 ನ್ನು ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಹೂಡಿರುತ್ತೇನೆ ಎಂದರೆ ಸಾಕ್ಷಿಯು ಸದರಿ ದಾವೆಯು ದಾರಿ ವಿಷಯಕ್ಕೆ ಸಂಬಂಧಿಸಿದ್ದು ಮತ್ತು ಈ ದಾವೆಯು ದಾವಾಸ್ತಿಯ ಅತಿಕ್ರಮಣಕ್ಕೆ ಸಂಬಂದಪಟ್ಟಿದ್ದು ಇರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಅಸಲು ದಾವೆ ಸಂಖ್ಯೆ 42/2020 ಹಾಗೂ ಈ ದಾವೆಯಲ್ಲಿ ಪಕ್ಷಗಾರರು, ದಾವಾಸ್ತಿ ಹಾಗೂ ದಾವಾ ವಿಷಯ ಒಂದೇ ಇರುವುದರಿಂದ ಈ ದಾವೆಯು ಕಾನೂನಿನಡಿಯಲ್ಲಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

2. ದಾವಾಸ್ತಿಯನ್ನು ಕ್ರಯಕ್ಕೆ ಪಡೆಯುವ ಪೂರ್ವದಲ್ಲಿ ಅಳತೆಯನ್ನು ಮಾಡಿ ನಂತರ ಖರೀದಿ ಮಾಡಿರುತ್ತೇವೆ. ಆ ಸಮಯಕ್ಕೆ ಮಾಡಿದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಆದರೆ ಖರೀದಿ ಮಾಡಿದ ನಂತರ ಇತ್ತೀಚೆಗೆ ಆಸ್ತಿಯನ್ನು ಅಳತೆ ಮಾಡಿಸುವಾಗ ಪ್ರತಿವಾದಿಯರು ಅತಿಕ್ರಮಣ ಮಾಡಿದುದ್ದರ ಬಗ್ಗೆ ಗೊತ್ತಾಗಿರುತ್ತದೆ ಮತ್ತು ಈ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ಸಾಕ್ಷ್ಯ ನುಡಿಯುತ್ತಾರೆ. ದಾವಾಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ದಾವಾಸ್ತಿಯ ಕೆಲವೊಂದು ಭಾಗಗಳು ಪ್ರತಿವಾದಿಯರ ಸ್ವಾಧೀನದಲ್ಲಿ ಇರುತ್ತದೆ ಎಂಬುದನ್ನು ನನ್ನ ಕ್ರಯಪತ್ರದಲ್ಲಿ ಬರೆಸಿರುವುದಿಲ್ಲ. ದಾವಾಸ್ತಿಯ ಅಂಶವು ಪ್ರತಿವಾದಿಯರ ಕೈಯಲ್ಲಿ ಇದ್ದು, ಮುಂದಿನ ದಿನಗಳಲ್ಲಿ ಸದರಿ ಅತಿಕ್ರಮಿಸಿದ ಜಾಗವನ್ನು ಬಿಟ್ಟುಕೊಡಬೇಕು ಎಂದು ಅಥವಾ ಸ್ವಾಧೀನಪಡಿಸಿಕೊಡಬೇಕು ಎಂಬುದನ್ನು ಕ್ರಯಪತ್ರದಲ್ಲಿ ನಮೂದಿಸಿರುವುದಿಲ್ಲ.

3. ನಮಗೆ ಖರೀದಿಗೆ ಕೊಟ್ಟ ದಾವಾಸ್ತಿಯ ಹಿಂದಿನ ಮಾಲೀಕರಿಗೆ ಪ್ರತಿವಾದಿಯರು ಖೀರಿದಿ ಮಾಡಿದ ಜಮೀನನ್ನು ಅತಿಕ್ರಮಿಸಿದ್ದು, ಅದನ್ನು ವಾಪಸ್ ಪಡೆದುಕೊಳ್ಳಲು ಕ್ರಮವನ್ನು ತೆಗೆದುಕೊಳ್ಳುವಂತೆ ನಾವು ನಮ್ಮ ಹಿಂದಿನ ಮಾಲೀಕರಿಗೆ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ. ದಾವಾಸ್ತಿಯನ್ನು ಖರೀದಿ ಮಾಡಿದ ನಂತರ ನಿಖರವಾಗಿ ಯಾವ ದಿವಸದಂದು ಸರ್ವೆ ಮಾಡಿರುತ್ತೇವೆ ಎಂದು ನನಗೆ ಗೊತ್ತಿರುವುದಿಲ್ಲ ಈ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ಸಾಕ್ಷ್ಯ ನುಡಿಯುತ್ತಾರೆ.

4. ನಾನು ನನ್ನ ದಾವೆಯಲ್ಲಿ ಪ್ರತಿವಾದಿಯರು ನಿರ್ಮಾಣ ಮಾಡುತ್ತಿದ್ದಾರೆ ಎಂದು ಪ್ರತಿಪಾದಿಸಿದ ಕಟ್ಟಡವು ಈ ಹಿಂದೆಯೇ ನಿರ್ಮಾಣಆಗಿದ್ದು, ನಂತರ ನಾನು ದಾವೆಯನ್ನು ಮಾಡಿದ್ದು, ಅದು ಕಾನೂನಿನಡಿಯಲ್ಲಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ನಾನು

ಆಧರಿಸುವಂತೆ ಪ್ರತಿವಾದಿಯರು ಯಾವತ್ತೂ ನಮ್ಮ ಆಸ್ತಿಯನ್ನು ಅತಿಕ್ರಮಿಸಿರುವುದಿಲ್ಲ, ಬದಲಾಗಿ ಪ್ರತಿವಾದಿಯರು ಅವರ ಸ್ವಂತ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ತಮಗೆ ಸೇರಿದ ಕಟ್ಟಡವನ್ನು ಅವರ ಜಮೀನಿನಲ್ಲಿಯೇ ನಿರ್ಮಾಣ ಮಾಡಿದ್ದು, ದಾವಾಸ್ತಿಯ ಯಾವುದೇ ಅಂಶವನ್ನು ಅವರು ಅತಿಕ್ರಮಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯನ್ನು ಈಗಾಗಲೇ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಿದ್ದು, ಯಾವುದೇ ವಿಚಾರಣೆಗಳು ಬಾಕಿ ಇರುವುದಿಲ್ಲ ಎಂದರೆ ಸರಿಯಲ್ಲ.

5. ಪ್ರತಿವಾದಿಯು ದಾವಾಸ್ತಿಯ ಅಂಶವನ್ನು ಅತಿಕ್ರಮಿಸಿ ಕಟ್ಟಡವನ್ನು ನಿರ್ಮಾಣ ಮಾಡುತ್ತಿದ್ದಾನೆ ಎಂದು ತೋರಿಸಲು ನಾನು ಭಾವಚಿತ್ರಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರದಲ್ಲಿ ನಮೂದಿಸಿದ ಕಟ್ಟಡವು ಈಗಾಗಲೇ ಪೂರ್ಣಗೊಂಡಿದ್ದು ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಈಗಾಗಲೇ ಕಟ್ಟಡವನ್ನು ಪೂರ್ತಿಗೊಳಿಸಿದ್ದರಿಂದ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ವಾದ ಪತ್ರ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸುಳ್ಳು ಸಂಗತಿಗಳನ್ನು ಬರೆಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ದಾವೆಯನ್ನು ಪುರಾವೆ ಪಡಿಸುವ ಸಲುವಾಗಿ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯು ಕಿತ್ತು ಹಾಕಲು ಯೋಗ್ಯ ಇರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ .**

**ಸಿವಿಲ್ ನ್ಯಾಯಾಧೀಶರು ಕಾರವಾರ**